ಅ) ಸದರಿ ಕಟ್ಟಡದ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು; ಹಾಗೂ ಪೂರ್ಣಗೊಳಿಸಲು ಎಷ್ಟು ಸಮಯ ಬೇಕಾಗಬಹುದು (ವಿವರ ನೀಡುವುದು)?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :-

ಆ) 1996-97 ನೇ ಸಾಲಿನ ಆಯವ್ಯಯದಲ್ಲಿ ಉಡುಪಿ ನಗರ ಆರಕ್ಷಕ ಠಾಣೆಯ ಕಟ್ಟಡ ನಿರ್ಮಾಣಕ್ಕಾಗಿ ಹಣವನ್ನು ಒದಗಿಸಿರುವುದಿಲ್ಲ.

ಆ) ಮುಂದಿನ ವರ್ಷಗಳ ಆಯವ್ಯಯದಲ್ಲಿ ಸೂಕ್ತ ಅನುದಾನ ಒದಗಿಸಿಕೊಂಡು ಕಟ್ಟಡದ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ವಿಷಯ :- ಬೆಂಗಳೂರಿನ ತಿಪ್ಪಗೊಂಡನಹಳ್ಳಿ ಜಲಾಶಯದ ಪ್ರಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 970 (710)

ಶ್ರೀ ಎನ್. ಸುರೇಶ್ ಕುಮಾರ್ (ರಾಜಾಜೀನಗರ) :- ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಿಪ್ಪಗೊಂಡನಹಳ್ಳಿಯಲ್ಲಿರುವ ಜಲಾಶಯದ ಪೂರ್ಣ ಮಟ್ಟವೆಷ್ಟು?

ಆ) ಕಳೆದ ಬಾರಿ ಜಲಾಶಯವು ಭರ್ತಿಯಾಗಿದ್ದು ಯಾವಾಗ?

ಇ) 1995-96 ನೇ ಸಾಲಿನಲ್ಲಿ ಜಲಾಶಯಕ್ಕೆ ಬಂದ ನೀರಿನ ಪ್ರಮಾಣವೆಷ್ಟು?

ಈ) ಈಗ ಹಾಲಿ ನೀರಿನ ಮಟ್ಟವೆಷ್ಟು?

ಉ) ಇನ್ನು ಎಷ್ಟು ಕಾಲ ಈಗ ಇರುವ ನೀರನ್ನು ಬೆಂಗಳೂರು ನಗರಕ್ಕೆ ಪೂರೈಸಬಹುದಾಗಿದೆ?

ಊ) ಬೆಂಗಳೂರು ನಗರದ ಉತ್ತರ ಭಾಗಕ್ಕೆ ಅಂದರೆ ರಾಜಾಜಿನಗರ ಮಲ್ಲೇಶ್ವರ, ಬಿನ್ನೀಪೇಟೆ, ಗಾಂಧಿನಗರ ಭಾಗಗಳಿಗೆ ತಿಪ್ಪಗೊಂಡನಹಳ್ಳಿ ಜಲಾಶಯ ಪೂರ್ತಿ ಖಾಲಿ ಆದ ಮೇಲೆ ನೀರು ಪೂರೈಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಅನಂತ್ ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :-

ಅ) ತಿಪ್ಪಗೊಂಡನಹಳ್ಳಿ ಜಲಾಶಯದ ಪೂರ್ಣ ಮಟ್ಟವು 75 ಅಡಿ (ಅಂದರೆ 2575 ಅಡಿ ಸಮುದ್ರ ಮಟ್ಟದಿಂದ)

ಅ) ಕಳೆದ ಬಾರಿ ಸೆಪ್ಟೆಂಬರ್ 93 ರಲ್ಲಿ ಈ ಜಲಾಶಯವು ಭರ್ತಿಯಾಗಿದ್ದಿತು.

ಇ) 1995-96 ನೇ ಸಾಲಿನಲ್ಲಿ ಜಲಾಶಯಕ್ಕೆ 825 ದಶಲಕ್ಷ ಘನ ಅಡಿಯಷ್ಟು ಮಾತ್ರ ನೀರು ಹರಿದು ಬಂದಿರುತ್ತದೆ.

ಈ) ಈಗ ಜಲಾಶಯದ ಹಾಲಿ ನೀರಿನ ಮಟ್ಟವು 8 ಅಡಿಗಳು (ಅಂದರೆ 2508 ಅಡಿ ಸಮುದ್ರ ಮಟ್ಟದಿಂದ) ಮಾತ್ರ ಇರುತ್ತದೆ. (ದಿ : 20-7-1996)

ಉ) ಈಗಿರುವ ನೀರಿನ ಶೇಖರಣೆಯಿಂದ 1996 ಆಗಸ್ಟ್ 31 ರವರೆಗೆ ಕಡಿಮೆ ಪಂಪಿಂಗ್‌ನಲ್ಲಿ ನಗರಕ್ಕೆ ನೀರನ್ನು ಪೂರೈಕೆ ಮಾಡಬಹುದು.

ಊ) ಕಾವೇರಿ ನೀರನ್ನು ಬೆಂಗಳೂರಿನ ಉತ್ತರ ಹಾಗೂ ಪಶ್ಚಿಮ ಭಾಗಗಳಿಗೆ ವಿಸ್ತರಿಸಲಾಗುವುದು. ಇದಲ್ಲದೆ, ನೀರನ್ನು ಅಧಿಕ ಸಂಖ್ಯೆಯಲ್ಲಿ ನೀರಿನ ಟ್ಯಾಂಕರ್‌ಗಳ ಮೂಲಕ ಅಭಾವ ಪೀಡಿತ ಪ್ರದೇಶಗಳಿಗೆ ನೀರು ಸರಬರಾಜು ಮಾಡಲಾಗುವುದು. ಇದಲ್ಲದೆ ನಗರದ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿರುವ 2500 ಕೊಳವೆ ಬಾವಿಗಳಿಂದಲೂ ನೀರಿನ ಪೂರಕ ವ್ಯವಸ್ಥೆಯನ್ನು ಮಾಡಲಾಗುವುದು.

ವಿಷಯ :– ಬೆಂಗಳೂರು ನಗರದ ಸಂಚಾರಿ ಪೋಲೀಸ್ ಸಿಬ್ಬಂದಿ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 971 (777)

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) :- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿರುವ ಸಂಚಾರಿ ಪೋಲೀಸ್ ಸಿಬ್ಬಂದಿ ಸಂಖ್ಯೆ ಎಷ್ಟು (ವಿವರ ನೀಡುವುದು) ;

ಆ) ಬೆಳೆಯುತ್ತಿರುವ ನಗರದಲ್ಲಿ ಹೆಚ್ಚುತ್ತಿರುವ ವಾಹನ ಸಂಚಾರದ ಕಾರಣ ದಿಂದ ಈಗ ಇರುವ ಸಿಬ್ಬಂದಿ ಸಾಕಾಗುವುದೇ ;

ಇ) ಈಗ ಅಗತ್ಯವಿರುವ ಹೆಚ್ಚಿನ ಸಿಬ್ಬಂದಿ ಸಂಖ್ಯೆ ಎಷ್ಟು ;

ಈ) ಈ ಅಗತ್ಯವನ್ನು ಎಂದು ಪೂರೈಸಲಾಗುವುದು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :-